ಕರ್ನಾಟಕ ಸರ್ಕಾರ

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,**

**ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ-562101**

Email id: dhochikballapur@gmail.com Ph.No: 08156-277034

**ಸಂಖ್ಯೆ: ಜಿಆಕುಕ/ಚಿಪುರ/ಸಿ(1)/ತಜ್ಞ ವೈದ್ಯರು/ಸಾ.ಕ.ವೈ/ಗು.ನೇ/01/2025-26** **ದಿನಾಂಕ: 19.01.2026**

**-:ಪ್ರಕಟಣೆ:-**

**ವಿಷಯ:-** ಚಿಕ್ಕಬಳ್ಳಾಪುರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು, ಸಮುದಾಯ ಆರೋಗ್ಯ ಕೇಂದ್ರ ಹೊಸೂರು ಇಲ್ಲಿ ಖಾಲಿ ಇರುವ ತಜ್ಞ ವೈದ್ಯರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 633 ಹೆಚ್‌ಎಸ್‌ಹೆಚ್ 2022, ಬೆಂಗಳೂರು, ದಿನಾಂಕ: 20.08.2022.
2. ಮಾನ್ಯ ಸರ್ಕಾರ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1), ಬೆಂಗಳೂರು ರವರ ಪತ್ರದ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/453/ಹೆಚ್‌ಎಸ್‌ಹೆಚ್/2022, ದಿನಾಂಕ: 13.12.2022.
3. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಪತ್ರದ ಸಂಖ್ಯೆ: ಜೆಆರ್‌ಓ(3)/134/2021-22, ದಿನಾಂಕ: 29.12.2022.
4. ಸರ್ಕಾರದ ಆದೇಶ ಸಂಖ್ಯೆ: ಆಕುಕ 201 ಸಿಜಿಎಂ 2022 ಬೆಂಗಳೂರು, ದಿನಾಂಕ: 09.07.2024.
5. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪತ್ರದ ಸಂಖ್ಯೆ: ಹೆಚ್‌ಎಸ್‌ಪಿ(1)/99/2017-18 (ಭಾಗ-1) (ಇ-1582514) ದಿನಾಂಕ: 15.11.2024.
6. ಮಾನ್ಯ ಸರ್ಕಾರ ಅಧೀನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು-1), ಬೆಂಗಳೂರು ರವರ ಪತ್ರದ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/21/ಹೆಚ್‌ಎಸ್‌ಹೆಚ್/2025, ದಿನಾಂಕ: 08.01.2025.
7. ಈ ಕಛೇರಿ ಸಮಸಂಖ್ಯೆ ಕಡತದ ಕಂಡಿಕೆ: 67 ರಲಿ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ದಿನಾಂಕ: 16.01.2026 ರಂದು ಅನುಮೋದಿಸಿರುವಂತೆ.

*&*&*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಮತ್ತು (6) ರನ್ವಯ ಚಿಕ್ಕಬಳ್ಳಾಪುರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರ ಹೊಸೂರು ಇಲ್ಲಿ ಖಾಲಿ ಇರುವ ತಜ್ಞ ವೈದ್ಯರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಖಾಯಂ ಹುದ್ದೆಗಳು ಭರ್ತಿಯಾಗುವವರೆಗೂ ಉಲ್ಲೇಖಿತ ಸರ್ಕಾರಿ ಆದೇಶಗಳನ್ವಯ ಹಾಗೂ ಉಲ್ಲೇಖ(7) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆಯಂತೆ ಅರ್ಹ ಅಭ್ಯರ್ಥಿಗಳಿಂದ **"ನೇರ ಸಂದರ್ಶನ"** ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸದರಿ ಪ್ರಕಟಣೆಯನ್ನು www.chikkaballapur.nic.in ರಲ್ಲಿ ಹೊರಡಿಸಲಾಗಿದ್ದು, ಸದರಿ ಪ್ರಕಟಣೆಗೆ ಸ್ಪಂದಿಸುವ ಅರ್ಹ ಅಭ್ಯರ್ಥಿಗಳು ದಿನಾಂಕ: 23.01.2026 ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಮಕ್ಷದಲ್ಲಿ ನಡೆಯುವ **"ನೇರ ಸಂದರ್ಶನ" ಕ್ಕೆ** ಎಲ್ಲಾ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಗೆ ಹಾಜರಾಗತಕ್ಕದ್ದು. ಮುಂದುವರೆದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಪ್ರತಿ ಸೋಮವಾರ **"ನೇರ ಸಂದರ್ಶನ"** ಮುಖಾಂತರ ಮೂಲ ದಾಖಲೆಗಳನ್ನು ಪರಿಶೀಲಿಸಿ ನೇಮಕ ಮಾಡಿಕೊಳ್ಳಲಾಗುವುದು.

**ಪು.ತಿ.ನೋ**

19/1/26

| ಕ್ರ.ಸಂ | ತಾಲ್ಲೂಕು | ಹುದ್ದೆಯ ಹೆಸರು | ಆರೋಗ್ಯ ಸಂಸ್ಥೆಯ ಹೆಸರು | ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಗೌರಿಬಿದನೂರು | ಅರವಳಿಕೆ ತಜ್ಞರು | ಸಮುದಾಯ ಆರೋಗ್ಯ ಕೇಂದ್ರ ಹೊಸೂರು | 1 |
| 1 | ಬಾಗೇಪಲ್ಲಿ | ಅರವಳಿಕೆ ತಜ್ಞರು | ಸಾರ್ವಜನಿಕ ಆಸ್ಪತ್ರೆ ಬಾಗೇಪಲ್ಲಿ | 1 |
| | | ರೇಡಿಯಾಲಜಿಸ್ಟ್ ತಜ್ಞರು | | 1 |
| 2 | ಚಿಂತಾಮಣಿ | ಅರವಳಿಕೆ ತಜ್ಞರು | ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿ | 1 |
| | | ಮಕ್ಕಳ ತಜ್ಞರು | | 1 |
| | | ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು | | 1 |
| 3 | ಗೌರಿಬಿದನೂರು | ಕೀಲು ಮತ್ತು ಮೂಳೆ ತಜ್ಞರು | ಸಾರ್ವಜನಿಕ ಆಸ್ಪತ್ರೆ ಗೌರಿಬಿದನೂರು | 1 |
| | | ರೇಡಿಯಾಲಜಿಸ್ಟ್ ತಜ್ಞರು | | 1 |
| 4 | ಶಿಡ್ಲಘಟ್ಟ | ಕೀಲು ಮತ್ತು ಮೂಳೆ ತಜ್ಞರು | ಸಾರ್ವಜನಿಕ ಆಸ್ಪತ್ರೆ ಶಿಡ್ಲಘಟ್ಟ | 1 |
| | | ರೇಡಿಯಾಲಜಿಸ್ಟ್ ತಜ್ಞರು | | 1 |
| 5 | ಗುಡಿಬಂಡೆ | ರೇಡಿಯಾಲಜಿಸ್ಟ್ ತಜ್ಞರು | ಸಾರ್ವಜನಿಕ ಆಸ್ಪತ್ರೆ ಗುಡಿಬಂಡೆ | 1 |
| 1 | ಚಿಕ್ಕಬಳ್ಳಾಪುರ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | ಪ್ರಾಥಮಿಕ ಆರೋಗ್ಯ ಕೇಂದ್ರ ಪೆರೇಸಂದ್ರ | 1 |
| 2 | ಶಿಡ್ಲಘಟ್ಟ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | ಪ್ರಾಥಮಿಕ ಆರೋಗ್ಯ ಕೇಂದ್ರ ಜಂಗಮಕೋಟೆ | 1 |
| 3 | ಗುಡಿಬಂಡೆ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | ಪ್ರಾಥಮಿಕ ಆರೋಗ್ಯ ಕೇಂದ್ರ ಎಲ್ಲೋಡು | 1 |

**ಷರತ್ತುಗಳು:-**

1. ಸದರಿ ಹುದ್ದೆಗಳ ನೇಮಕಾತಿಯು ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರವಾಗಿದ್ದು, ವೈದ್ಯರನ್ನು ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸಲಾಗುವುದಿಲ್ಲ.
2. ಎಂ.ಬಿ.ಬಿ.ಎಸ್. ಪದವಿ ಹೊಂದಿರುವ ಮತ್ತು ಸಂಬಂಧಪಟ್ಟ ತಜ್ಞತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಸದರಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳತಕ್ಕದ್ದು.
3. ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಸರ್ಕಾರಿ ಆದೇಶದನ್ವಯ ಮಾಸಿಕ ರೂ.60000/- ಗಳ ವೇತನ ನಿಗದಿಪಡಿಸಿದೆ.
4. ತಜ್ಞ ವೈದ್ಯರುಗಳಿಗೆ ಸರ್ಕಾರಿ ಆದೇಶದನ್ವಯ ಮಾಸಿಕ ರೂ.70000/- ಗಳ ವೇತನ ನಿಗದಿಪಡಿಸಿದೆ.

19/1/26

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ**

19/01/26